ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1846(2020)
ಸದಸ್ಯರ ಹೆಸರು : ಶ್ರೀ ಸಿ.ಟಿ.ರವಿ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 25-03-2026.
ಉತ್ತರಿಸುವ ಸಚಿವರು : ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ ಎಷ್ಟು ಜನ ಸಾಲ ಪಡೆದಿದ್ದಾರೆ; ಸಾಲದ ಒಟ್ಟು ಮೊತ್ತ ಮತ್ತು ಬಡ್ಡಿ ಎಷ್ಟು; (ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾವಾರು ನೀಡುವುದು)	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2013-14 ನೇ ಸಾಲಿನಿಂದ 2024-25ನೇ ಸಾಲಿನವರೆಗೆ ವಿವಿಧ ಸಾಲಸೌಲಭ್ಯ/ಸಹಾಯಧನ ಯೋಜನೆಗಳಡಿ ಒಟ್ಟು **2,35,845** ಫಲಾನುಭವಿಗಳು ಸಾಲ ಪಡೆದಿದ್ದು, ಒಟ್ಟು **ರೂ. 1185.62** ಕೋಟಿ ಸಾಲ ನೀಡಲಾಗಿರುತ್ತದೆ. 2013-14ನೇ ಸಾಲಿನಿಂದ 2024-25ನೇ ಸಾಲಿನವರೆಗೆ ವಿವಿಧ ಸಾಲ ಯೋಜನೆಗಳಡಿ ಒಟ್ಟು **ರೂ.150.29** ಕೋಟಿ ಮೊತ್ತ ಮರುಪಾವತಿ ಆಗಿರುತ್ತದೆ. ಫಲಾನುಭವಿಗಳ ಪಟ್ಟಿ ಹಾಗೂ ಜಿಲ್ಲಾವಾರು ವಿವರವನ್ನು **ಅನುಬಂಧ – "ಅ" (ಸಿ.ಡಿ.ಯಲ್ಲಿ)** ನೀಡಲಾಗಿದೆ.
ಆ)	ಈ ಪೈಕಿ ಎಷ್ಟು ಸಾಲ ಮರುಪಾವತಿ ಆಗಿದೆ; ಒಟ್ಟು ಮೊತ್ತ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	
ಇ)	ಕಳೆದ 3 ವರ್ಷದಿಂದ ಎಷ್ಟು ಜನರಿಗೆ ನಿಗಮದ ವತಿಯಿಂದ ಸಾಲ ನೀಡಲಾಗಿದೆ; ಈ ಪೈಕಿ ಎಷ್ಟು ಸಾಲ ಮರುಪಾವತಿ ಆಗಿದೆ; (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು)	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕಳೆದ 3 ವರ್ಷಗಳಲ್ಲಿ (2022-23, 2023-24 ಮತ್ತು 2024-25ನೇ ಸಾಲಿನಲ್ಲಿ) ವಿವಿಧ ಸಾಲ ಯೋಜನೆಗಳಡಿ ಒಟ್ಟು **26241** ಫಲಾನುಭವಿಗಳು ಸಾಲ ಪಡೆದಿದ್ದು, ಒಟ್ಟು **ರೂ. 388.12** ಕೋಟಿ ಸಾಲ ನೀಡಲಾಗಿರುತ್ತದೆ. ಮುಂದುವರೆದು, ನಿಗಮದಿಂದ ಒದಗಿಸಲಾಗಿರುವ ಸಾಲ ಮತ್ತು ಮರುಪಾವತಿ ಆಗಿರುವ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ – "ಆ" (ಸಿ.ಡಿ.ಯಲ್ಲಿ)** ನೀಡಲಾಗಿದೆ.
ಈ)	ಸಾಲದ ಬಡ್ಡಿ ಮನ್ನಾ ಮಾಡಲು ಮತ್ತು ಸಾಲವನ್ನು ಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆಯೇ; ಸರ್ಕಾರದ ನಿರ್ಧಾರಕ್ಕೆ ಕಾರಣಗಳೇನು;	ಸರ್ಕಾರದ ಆದೇಶ ಸಂಖ್ಯೆ: MWD – MDC/1/2026, ದಿನಾಂಕ: 12.02.2026 ರನ್ವಯ 2013-14 ರಿಂದ 2018-19ನೇ ಸಾಲಿನಲ್ಲಿ ನಿಗಮದಿಂದ ವಿವಿಧ ಯೋಜನೆಗಳಡಿ ನೀಡಲಾಗಿರುವ ಸಾಲದ ಮೊತ್ತವನ್ನು ಪೂರ್ಣವಾಗಿ ಅಸಲು ಪಾವತಿಸಿದ ಫಲಾನುಭವಿಗಳಿಗೆ ಬಡ್ಡಿಯನ್ನು ಮನ್ನಾ ಮಾಡಲು ಒಂದಾವರ್ತಿ ತೀರುವಳಿ ಯೋಜನೆಯನ್ನು (One Time Settlement Scheme ("OTS") ಅನುಷ್ಠಾನಗೊಳಿಸಲು ಆದೇಶಿಸಲಾಗಿದ್ದು, ಈ ಯೋಜನೆಯನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
ಉ)	ಈವರೆಗೆ ಎಷ್ಟು ಜನರ ಸಾಲ ಮತ್ತು ಸಾಲದ ಬಡ್ಡಿ ಮನ್ನಾ ಮಾಡಲಾಗಿದೆ; ಒಟ್ಟು ಮೊತ್ತ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)	

ಸಂಖ್ಯೆ:MWD 76 LMQ 2026

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು